ಸಂಪುಟ: ೨ ಸಂಚಿಕೆ: ೧ ಪುಟ: ೪ ಜುಲೈ ೨೦೧೮
* ಆಂತರಿಕ ಪ್ರಸರಣಕ್ಕೆ ಮಾತ್ರ

ಅರಿವು ಶಾಲೆಯ ಮಾಸಪತ್ರಿಕೆ

# ಅಂಗಳ

ಮಾಹಿತಿ, ಜ್ಞಾನ, ಸೃಜನಶೀಲತೆಗೊಂದು ವೇದಿಕೆ

ಸಂಪಾದಕರು: ಡಾ.ಎಂ.ಸಿ.ಮನೋಹರ
ಸಂಚಿಕೆ ಸಂಪಾದಕರು: ಚೇತನಾ ಭಟ್
www.arivu.org | e-mail: info@arivu.org





೧ ರಿಂದ ೯ ನೇ ತರಗತಿಯ ಬಹಳಷ್ಟು ಮಕ್ಕಳು ಮತ್ತು ಶಿಕ್ಷಕರು ಬರವಣಿಗೆಯಲ್ಲಿ ತೊಡಗಿ ಸಿಕೊಂಡಿದ್ದಾರೆ. ಇದು ಅರಿವುನಲ್ಲಿ ಸಾಹಿತ್ಯಿಕ ವಾತಾವರಣ ಮತ್ತು ಬರೆಯುವ ಸಂಸ್ಕೃತಿ ನಿರ್ಮಾಣ ವಾಗುತ್ತಿರುವುದರ ಸೂಚನೆಯಾಗಿದೆ.

## ಸಾಹಿತ್ಯಿಕ ವಾತಾವರಣ, ಬರೆಯುವ ಸಂಸ್ಕೃತಿ ನಿರ್ಮಾಣ

ಮಾನ್ಯರೆ,

'ಅಂಗಳ' ಒಂದು ವರ್ಷ ನಿಯಮಿತವಾಗಿ ಪ್ರತಿ ತಿಂಗಳ ೨ನೇ ಶನಿವಾರ ಪ್ರಕಟಗೊಂಡಿದೆ. ಇದಕ್ಕೆ ಜವಾಬ್ದಾರಿ ತೆಗೆದುಕೊಂಡು ಕಾರ್ಯ ನಿರ್ವಹಿಸಿದ ಸಂಚಿಕೆ ಸಂಪಾದಕರು, ಬರೆದ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪ್ರೋತ್ಸಾಹಿಸಿದ ಪೋಷಕರು ಕಾರಣ. ಜೊತೆಗೆ, ಅರಿವು ಟ್ರಸ್ಟ್‌ನ ಸದಸ್ಯರು ಮತ್ತು ಹಿತೈಷಿಗಳ ಬೆಂಬಲವೂ ಇದೆ. ಸೃಜನಶೀಲ ಹಾಗೂ ಸ್ವಂತ ಅನುಭವದ ಬರವಣಿಗೆಗೆ ಅಂಗಳದಲ್ಲಿ ಮೊದಲ ಪ್ರಾಶಸ್ತ್ಯ. ಜೊತೆಗೆ, ಅರಿವುಗೆ ಸಂಬಂಧಿಸಿದ ಚಟುವಟಿಕೆಗಳ ವರದಿಗಳನ್ನೂ ಪ್ರಕಟಿಸುತ್ತಿದ್ದೇವೆ. ೧ ರಿಂದ ೯ ನೇ ತರಗತಿಯ ಬಹಳಷ್ಟು ಮಕ್ಕಳು ಮತ್ತು ಶಿಕ್ಷಕರು ಬರವಣಿಗೆಯಲ್ಲಿ ತೊಡಗಿ ಸಿಕೊಂಡಿದ್ದಾರೆ. ಇದು ಅರಿವುನಲ್ಲಿ ಸಾಹಿತ್ಯಿಕ ವಾತಾವರಣ ಮತ್ತು ಬರೆಯುವ ಸಂಸ್ಕೃತಿ ನಿರ್ಮಾಣ ವಾಗುತ್ತಿರುವುದರ ಸೂಚನೆಯಾಗಿದೆ. ಈ ವರ್ಷವೂ ಶಿಕ್ಷಕರು ಮತ್ತು ಮಕ್ಕಳು ಬರೆಯುವುದರ ಮೂಲಕ ಅಂಗಳ ವನ್ನು ಬೆಳೆಸು ತ್ತಾರೆಂಬ ನಂಬಿಕೆಯಿದೆ. ಅಂಗಳಕ್ಕೆ ಶಿಸ್ತನ್ನು ಮೂಡಿಸಿರುವ ಮುಳ್ಳೂರು ರಾಜು, ಅಂದವನ್ನು ಹೆಚ್ಚಿಸಿರುವ ಸಂದೇಶ್–ತೇಜಸ್ ಜೋಡಿಯ ಬೆಂಬಲ–ಸಹಕಾರ ಈ ವರ್ಷವೂ ಮುಂದುವರೆಯುತ್ತದೆಂಬ ವಿಶ್ವಾಸವಿದೆ. ವಂದನೆಗಳೊಂದಿಗೆ, । ಪ್ರಧಾನ ಸಂಪಾದಕ

## ಚಿಟ್ಟೆ..... ಚಿಟ್ಟೆ..... ನೀನು ಬಂದೇ ಬಿಟ್ಟೆ






ಯಾವುದೇ ವಯಸ್ಸಿನ ಅಂತರವಿಲ್ಲದೆ, ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ಇಷ್ಟವಾಗುವ ಚಿಟ್ಟೆಗಳ ಉದ್ಯಾನವನ್ನು ಅರಿವು ಶಾಲೆಯಲ್ಲಿ ಅಭಿವೃದ್ಧಿಪಡಿಸ ಲಾಗಿದೆ. ಈ ಉದ್ಯಾನದಲ್ಲಿ ಚಿಟ್ಟೆಗಳು ಮೊಟ್ಟೆ ಇಟ್ಟು ಮರಿ ಮಾಡಲು ಹಾಗೂ ಮಕರಂದ ಹೀರಲು ಪೂರಕವಾದ ಗಿಡಗಳನ್ನು ನೆಟ್ಟು ಬೆಳಸಲಾಗಿದೆ. ಈ ಗಿಡಗಳ ಕನ್ನಡ, ಇಂಗ್ಲಿಷ್ ಮತ್ತು ವೈಜ್ಞಾನಿಕ ಹೆಸರು, ಅವುಗಳು ಆಕರ್ಷಿಸುವ ಚಿಟ್ಟೆ ಪ್ರಭೇದಗಳ ವಿವರವನ್ನು ಫಲಕಗಳಲ್ಲಿ ಬರೆದು ಅಳವಡಿಸಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಮತ್ತು ಸಾರ್ವಜನಿಕರಲ್ಲಿ ಚಿಟ್ಟೆಗಳ ಜೀವನ ಚಕ್ರದ ಬಗ್ಗೆ ಕುತೂಹಲ ಮೂಡಿಸುವ ಉದ್ದೇಶದಿಂದ ಈ ಉದ್ಯಾನವನ್ನು ಅಭಿವೃದ್ಧಿಪಡಿಸಲಾಗಿದೆ. ಈಗಾಗಲೇ ಅನೇಕ ಚಿಟ್ಟೆಗಳು ಇಲ್ಲಿ ಮೊಟ್ಟೆಯಿಟ್ಟು ಮರಿ ಮಾಡಿವೆ. ಈ ಉದ್ಯಾನವನ್ನು ಅರಿವು ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕರು, ಸಂಪನ್ಮೂಲ ವ್ಯಕ್ತಿ ಎಂ.ಸಹನಾ ಮತ್ತು ಶಿಕ್ಷಕಿ ಎಂ.ಸಿ.ಸುಮನಾ ಅವರ ಮಾರ್ಗದರ್ಶದಲ್ಲಿ ಬೆಳೆಸಲಾಗಿದೆ. ಪರಿಸರ ಸಂಪನ್ಮೂಲ ವ್ಯಕ್ತಿಗಳಾದ ಪಿ. ಗುರುಪ್ರಸಾದ್, ಮೋಹನ್ ಕುಮಾರ್, ಪವನ್, ಡಾ.ಅಭಿಜಿತ್ ಮತ್ತು ಅರಿವು ಮ್ಯಾನೇಜಿಂಗ್ ಟ್ರಸ್ಟಿ ಡಾ.ಎಂ.ಸಿ. ಮನೋಹರ ಸಹಕರಿಸಿದ್ದಾರೆ. ಇದಲ್ಲದೆ, ಶಾಲಾವರಣದಲ್ಲಿರುವ ಸುಮಾರು 40 ವಿವಿಧ ಜಾತಿಯ ಮರಗಳಿಗೂ ಮಾಹಿತಿ ಫಲಕಗಳನ್ನು ಅಳವಡಿಸಲಾಗಿದೆ. ಅರಿವು ಚಿಟ್ಟೆ ಉದ್ಯಾನವನ್ನು ಜಿಲ್ಲಾಧಿಕಾರಿ ಅಭಿರಾಮ್ ಜಿ.ಶಂಕರ್‌ರವರು ಜೂನ್ 3 ರಂದು ಸಾಂಪ್ರದಾಯಿಕವಾಗಿ ಉದ್ಘಾಟಿಸಿ ದರು. ಈ ಸಂದರ್ಭದಲ್ಲಿ ಸ್ವತಃ ನುರಿತ ಪಕ್ಷಿ ವೀಕ್ಷಕರೂ ಆದ ಜಿಲ್ಲಾಧಿಕಾರಿಯವರು, ಅರಿವು ಶಾಲೆಯ ಪ್ರಯತ್ನವನ್ನು ಮೆಚ್ಚುತ್ತಾ, ಪೋಷಕರು ಸಹ ಮಕ್ಕಳಿಗೆ ಪರಿಸರ ಸಂಬಂಧಿ ಚಟುವಟಿಕೆಗಳಲ್ಲಿ ಪಾಲ್ಗೊ ಳ್ಳಲು ಪ್ರೋತ್ಸಾಹಿಸಬೇಕು ಎಂದು ಸಲಹೆ ನೀಡಿದರು. ಪರಿಸರದಲ್ಲಿರುವ ಚಿಟ್ಟೆ, ಪಕ್ಷಿ, ಗಿಡ ಮರಗಳ ಬಗ್ಗೆ ಕುತೂಹಲ ಹಾಗೂ ಜ್ಞಾನವಿದ್ದರೆ, ಮಕ್ಕಳು ಕಷ್ಟದ ಸನ್ನಿವೇಶಗಳಲ್ಲಿ ಖಿನ್ನತೆಗೆ ಒಳಗಾಗುವ ಸಾಧ್ಯತೆ ಕಡಿಮೆಯಿರುತ್ತದೆ ಎಂಬ ಮಾಹಿತಿ ನೀಡಿದರು. ಪಕ್ಷಿ ವೀಕ್ಷಣೆಯ ತಮ್ಮ ಕೆಲವು ಅನುಭವಗಳನ್ನೂ ಜಿಲ್ಲಾಧಿಕಾರಿ ಹಂಚಿಕೊಂಡರು. ನಂತರ ಎಂ.ಸಹನಾರವರು ಹಿಮಾಲಯದ ಪಕ್ಷಿಗಳ ಬಗ್ಗೆ ವರ್ಣಪಾರದರ್ಶಿಕೆಯ ಸಹಿತ ಉಪನ್ಯಾಸ ನೀಡಿದರು. । ಡಾ.ಎಂ.ಸಿ.ಮನೋಹರ

## ಹೃದಯದ ಸಂವೇದನೆ ಮೀಟಿದ 'ಮತ್ತೊಬ್ಬ ಮಾಯಿ'

ನಾಟಕವೇ ಮೊದಲಾದ ಕಲೆಗಳಲ್ಲಿ ಸಾಕಷ್ಟು ಆಸಕ್ತಿಯಿದ್ದರೂ, ಕಲೆಯನ್ನು ಮೂಕ ಪ್ರೇಕ್ಷಕನಾಗಿ ಆಸ್ವಾದಿಸುವ ಗುಂಪಿಗೆ ಸೇರಿದವರ ಪೈಕಿ ನಾನೂ ಒಬ್ಬ. ಯಾವುದೇ ಪ್ರದರ್ಶನವನ್ನು ನೋಡಿ ಬಂದ ಬಳಿಕ ಪ್ರತಿಕ್ರಿಯೆಯನ್ನು ಈ ರೀತಿಯಾಗಿ ಹಂಚಿ ಕೊಳ್ಳುತ್ತಿರುವುದಂತೂ ವಿರಳಾತಿವಿರಳ. ಹೌದು! ಇಂತಹ ಒಂದು ಪ್ರತಿಕ್ರಿಯೆಗೆ ಕಾರಣ ವಾಗಿದ್ದು ಜೂನ್ 26 ರಂದು ಸಂಜೆ ನಮ್ಮ ಅರಿವು ಶಾಲೆಯಲ್ಲಿ ಪ್ರದರ್ಶಿಸಲ್ಪಟ್ಟ 'ಮತ್ತೊಬ್ಬ ಮಾಯಿ' ನಾಟಕ. ಶ್ರೀ ರಾಘವೇಂದ್ರ ಪಾಟೀಲರ ಕೃತಿಯನ್ನು ರಂಗದ ಮೇಲೆ ಪ್ರದರ್ಶಿಸುವ ಕಲ್ಪನೆ ಧಾರ ವಾಡದ ಆಟ–ಮಾಟ ಸಂಸ್ಥೆಯ ಮಹಾದೇವ ಹಡಪದ ಅವರದು. ಈ ನಾಟಕವನ್ನು ವಿಭಿನ್ನತೆಯಿಂದ ಕೂಡಿದ ಕಥಾವಾಚನ ಎಂದರೂ ಸರಿಯೆ. ಕಾರಣ ಇಡೀ ರಂಗದ ಮೇಲೆ ಬರುವ ಪಾತ್ರ ಎರಡೇ. ಈ ಪಾತ್ರಗಳು ನಾಟಕದ ಕಥೆಯ ಸೂತ್ರದಾರರೂ ಹೌದು. ಉಪನ್ಯಾಸಕ ರಿಬ್ಬರ ನಡುವೆ ಬಿಡುವಿನ ವೇಳೆಯಲ್ಲಿ ಕಾಲೇಜಿನ ವಿಶ್ರಾಂತಿ ಕೊಠಡಿ ಯಲ್ಲಿ ನಡೆಯುವ ಸಂಭಾಷಣೆ ಯಲ್ಲಿ ಇಡೀ ನಾಟಕ ನಡೆಯುತ್ತದೆ. ಆಕಸ್ಮಿಕವಾಗಿ




ಪರಿಚಿತಳಾದ ಅತ್ಯಂತ ಚುರುಕಾದ ಬಾಲಕಿಯೊಬ್ಬಳ ಜೀವನದ ಕಥೆಯನ್ನು ಎಳೆ ಎಳೆಯಾಗಿ ವಾಚಿಕದ ಮೂಲಕ ಅಭಿನ ಯಿಸುವ ಸವಾಲನ್ನು ಪಾತ್ರಧಾರಿಗಳಿಬ್ಬರೂ ಅತ್ಯಂತ ಸೂಕ್ತವಾಗಿ ಹಾಗೂ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಆಹಾರ್ಯದ ವಿಷಯದಲ್ಲಿ ಅತ್ಯಂತ ಕನಿಷ್ಠ ಪರಿಕರಗಳು. ಉಳಿದೆಲ್ಲವೂ ಪಾತ್ರಗಳ ಆಂಗಿಕಾ ಭಿನಯ. ಆದರೆ ಪ್ರೇಕ್ಷಕರಿಗೆ ಮಾತ್ರ ಎಲ್ಲಿಯೂ, ಯಾವ ಕೊರತೆಯೂ ಕಾಣಿಸದಷ್ಟರ ಮಟ್ಟಿಗೆ ಕರಾರುವಾಕ್ಕು ಪ್ರಯೋಗ. ಈ ಹಿಂದೆ ರಂಗಾ ಯಣದ ಬಹುರೂಪಿಯಲ್ಲಿ 'ರಾಧೆ' ಎಂಬ ಏಕವ್ಯಕ್ತಿ ಪ್ರದರ್ಶನವನ್ನು ನೋಡಿ ಮೆಚ್ಚಿದ್ದೆ. ಆದರೆ 'ಮತ್ತೊಬ್ಬ ಮಾಯಿ' ನನ್ನನ್ನು ಮೆಚ್ಚಿಸಿದ್ದರ ಜೊತೆಗೆ, ಚಿಂತನೆಗೆ ಹಚ್ಚಿದ್ದು ಮಾತ್ರ ಸುಳ್ಳಲ್ಲ. ಇಲ್ಲಿ ಬೇಕೆಂದೇ ನಾಟ ಕದ ಪೂರ್ಣ ಕಥೆಯನ್ನು ಹೇಳುತ್ತಿಲ್ಲ. ಕಾರಣ, ಮತ್ತೊಮ್ಮೆ ಎಲ್ಲಿ ಯಾದರೂ ಪ್ರದರ್ಶನ ಕಂಡರೆ ತಪ್ಪದೆ ನೋಡಿ ಆಸ್ವಾದಿಸಿ. ಸ್ಪಂದಿ ಸುವ ಹೃದಯ ವಿದ್ದರೆ ನಿಮ್ಮ ಸುತ್ತಮುತ್ತ ಲಲ್ಲಿ 'ಮತ್ತೊಬ್ಬ ಮಾಯಿ' ಕಂಡರೂ ಕಾಣ ಬಹುದು. ಹತ್ತು ಜನ ಸೇರುವಷ್ಟು ಜಾಗವಿದ್ದರೂ, ಅಲ್ಲಿಯೇ ಅಭಿನಯಿಸಿ ಜನರ ಮನವನ್ನು ತಲುಪುವ, ಹೃದಯದ ಸಂವೇದನೆಯನ್ನು ಮೀಟಿ ಚಿಂತನೆಗೆ ದಾರಿ ಮಾಡುವ ಇಂತಹ ಒಂದು ಯಶಸ್ವಿ ರಂಗ ಪ್ರಯೋಗವನ್ನು ನಮಗೆ ಆಸ್ವಾದಿಸಲು ಕಾರಣ ರಾದ ಅರಿವು ಶಾಲೆಗೆ ಕೃತಜ್ಞತೆಗಳು ಹಾಗೂ ಆಟ–ಮಾಟ ಸಂಸ್ಥೆಯ ಎಲ್ಲರಿಗೂ ಅಭಿನಂ ದನೆಗಳು. । ಪವನ್ ರಾಮಚಂದ್ರ ಸ್ವಯಂ ಸೇವಕ, ಅರಿವು ಪರಿಸರ ಸಂಪನ್ಮೂಲ ಕೇಂದ್ರ



## ಸಂಪಾದಕೀಯ

ಆತ್ಮೀಯ ಓದುಗರೆ,

ಅರಿವು ಶಾಲೆಯ 'ಅಂಗಳ' ಪತ್ರಿಕೆ ಎರಡನೇ ವರ್ಷಕ್ಕೆ ಕಾಲಿಡುತ್ತಿರುವುದು ತುಂಬಾ ಸಂತಸದ ವಿಷಯ. ನಿಮ್ಮೆಲ್ಲರ ಪ್ರೋತ್ಸಾಹ, ಸಹಕಾರ ಇದೇ ರೀತಿ ಮುಂದುವರಿಯುತ್ತದೆಂಬ ನಂಬಿಕೆಯಿದೆ. ಅರಿವು ಶಾಲೆಯಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಹೊಸದಾಗಿ ಕಲಾ ಕೊಠಡಿಯೊಂದನ್ನು ನಿರ್ಮಿಸಲಾಗಿದೆ. ಇದರಿಂದ ಮಕ್ಕಳ ಕಲಾಭಿವ್ಯಕ್ತಿ ಮತ್ತು ಅಭ್ಯಾಸಕ್ಕೆ ಅನುಕೂಲವಾಗಲಿದೆ. ಈ ವರ್ಷ ನಮ್ಮ ಶಾಲೆಗೆ ಹೊಸದಾಗಿ ೪೦ ವಿದ್ಯಾರ್ಥಿಗಳು ಮತ್ತು ಶಿಕ್ಷಕರಾಗಿ ಅಮೃತಾ ಸೇರ್ಪಡೆಗೊಂಡಿದ್ದಾರೆ. ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀಹರಿ, ಶರತ್, ದಿವಾಕರ್, ವೀಣಾ ಮತ್ತು ಅನೇಕ ಪೋಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅರಿವು ಮಕ್ಕಳ ಮತ್ತು ಶಿಕ್ಷಕರ ಸಂಖ್ಯೆ ಪ್ರತಿ ವರ್ಷವೂ ಹೆಚ್ಚಾಗುತ್ತಿದೆ. ಅದಕ್ಕನುಗುಣವಾಗಿ, ಕಲಿಕೆಯ ಗುಣಮಟ್ಟ ಹೆಚ್ಚಿಸಿಕೊಳ್ಳುವ ಮತ್ತು ಶಾಲೆಯಲ್ಲಿರುವ ಕೌಟುಂಬಿಕ ವಾತಾವರಣವನ್ನು ಕಾಯ್ದುಕೊಳ್ಳುವ ಸವಾಲು ಸಹ ನಮ್ಮ ಮುಂದಿದೆ. ಎಲ್ಲರ ಸಹಾಯ ಮತ್ತು ಸಹಕಾರದಿಂದ ಆ ಸವಾಲನ್ನು ಎದುರಿಸುವ ವಿಶ್ವಾಸವಿದೆ. ಈ ಸಂಚಿಕೆ ಸಂಪಾದಕಿಯಾಗಿ ಕಾರ್ಯನಿರ್ವಹಿಸಲು ಅವಕಾಶ ಮಾಡಿಕೊಟ್ಟ ಅರಿವು ಆಡಳಿತ ಮಂಡಳಿ, ಲೇಖನಗಳನ್ನು ನೀಡಿದ ವಿದ್ಯಾರ್ಥಿಗಳಿಗೆ ಮತ್ತು ಸಹಾಯ ಮಾಡಿದ ಸಹದ್ಯೋಗಿ ಜಾಯಲಿನ್‌ರವರಿಗೆ ಧನ್ಯವಾದಗಳು.



। ಚೇತನಾ ಭಟ್ ಶಿಕ್ಷಕಿ

## ಮಕ್ಕಳಲ್ಲಿ ವಿಜ್ಞಾನದ ಬೀಜ ಬಿತ್ತಿದ ಐಐಎಸ್‌ಸಿ

ಪ್ರತಿಷ್ಠಿತ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಯಲ್ಲಿ ಸರ್.ಸಿ.ವಿ.ರಾಮನ್ ಹುಟ್ಟುಹಬ್ಬ, ವಿಜ್ಞಾನ ದಿನವನ್ನು ಮುಕ್ತದಿನ (ಓಪನ್ ಡೇ)ವನ್ನಾಗಿ ಆಚರಿಸುತ್ತಾರೆ. ಆ ದಿನ ವಿಜ್ಞಾನದಲ್ಲಿ ಆಸಕ್ತಿ ಇರುವವರಿಗೆ, ವಿಭಾಗಗಳಲ್ಲಿ ನಡೆಯುವ ಅನ್ವೇಷಣೆ ಮತ್ತು ಕಾರ್ಯವಿಧಾನಗಳನ್ನು ನೋಡಿ, ಪ್ರಶ್ನೆ ಕೇಳಿ ತಿಳಿಯುವ ಅವಕಾಶವಿರುತ್ತದೆ. ಭಾರತೀಯ ವಿಜ್ಞಾನ ಕ್ಷೇತ್ರದ ಶುದ್ಧ ವಿಜ್ಞಾನ ಸಂಶೋಧನಾ ಕೇಂದ್ರವಾಗಿರುವ, ಎಲ್ಲ ಯುವ ವಿಜ್ಞಾನಿಗಳ ಮೊದಲ ಆಯ್ಕೆಯಾಗಿರುವ ಕರ್ನಾಟಕದಲ್ಲೇ ಇರುವ ಈ ಕೇಂದ್ರಕ್ಕೆ ನಮ್ಮ ಶಾಲೆಯ ಮಕ್ಕಳೊಂದಿಗೆ ಭೇಟಿ ನೀಡಿದ್ದೆವು.

ಮಕ್ಕಳಲ್ಲಿ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸಲು, ಭವಿಷ್ಯದ ವಿಜ್ಞಾನ ಕ್ಷೇತ್ರದ ಆಯ್ಕೆಯ ಬೀಜ ಬಿತ್ತಲು ಈ ಸಂದರ್ಭ ಸೂಕ್ತವೆನಿಸಿತು. ಅಗಾಧ ವನರಾಶಿಯ ನಡುವೆ, ಅಲ್ಲೊಂದು ಇಲ್ಲೊಂದು ಕಟ್ಟಡಗಳು, ತುಂಬಿ ತುಳುಕುತ್ತಿದ್ದ ಮಕ್ಕಳು–ಆಸಕ್ತರ ನಡುವೆ ನಾವು ರಸಾಯನಶಾಸ್ತ್ರ, ಜೀವವಿಜ್ಞಾನ, ಬಯೋಕೆಮಿಸ್ಟ್ರಿ, ಮೈಕ್ರೋಬಯಾಲಜಿ, ಹೈ–ವೋಲ್ಟೇಜ್ ಪ್ರಯೋಗಾಲಯ, ಪರಿಸರ ಅಧ್ಯಯನ ಮತ್ತು ನರಶಾಸ್ತ್ರ ವಿಭಾಗಗಳಿಗೆ ಭೇಟಿ ನೀಡಿದೆವು. ರಸಾಯನಶಾಸ್ತ್ರದಲ್ಲಿ ನೋಡಿದ, ಶುದ್ಧ ಪಿಷ್ಟದ ಪ್ರಯೋಗ, ಪಟಾಕಿ ರಾಸಾಯನಿಕಗಳು, ನೈಲಾನ್ ಉತ್ಪಾದನೆ, ರಹಸ್ಯ ಬರಹ, ನೀರಿನ ಹನಿಯ ಸೂಕ್ಷ್ಮದರ್ಶಕ ಯಂತ್ರ, ಬಣ್ಣ ಬಣ್ಣದ ಬೆಂಕಿಯುಗುಳುವ ವಿವಿಧ ರಾಸಾಯನಿಕ ಕ್ರಿಯೆಗಳನ್ನು ನೋಡಿ, ನೋಡಿ ಮಕ್ಕಳು ಬೆರಗಾದರು. ಮಿಂಚು ಹಾಗೂ ಶಬ್ದ ಉತ್ಪತ್ತಿಗಳನ್ನು ನೋಡಿ ಬೆಚ್ಚಿದರು. ನರ ಸಂಬಂಧಿ ರೋಗಗಳ ಬಗ್ಗೆ ತಿಳಿದರು. ವಿವಿಧ ರೋಗಗಳನ್ನು ತರುವ ಸೂಕ್ಷ್ಮಾಣು ಜೀವಿಗಳನ್ನು ಸೂಕ್ಷ್ಮದರ್ಶಕದಲ್ಲಿ ನೋಡಿದರು. ಡಿಎನ್ಎ, ಆರ್‌ಎನ್ಎ ಮಾದರಿಗಳ ಬಗ್ಗೆ ತಿಳಿದರು. ಪರಿಸರ ವಿಭಾಗದಲ್ಲಿ ಅಧ್ಯಯನ ರೂಪಿತ ಆಟಗಳನ್ನಾಡಿ ದಣಿದರು. ಇನ್ನೂ ಸುತ್ತಬೇಕು, ತಿಳಿಯಬೇಕೆಂಬ ಬಯಕೆಗೆ ಮಕ್ಕಳ ಕಾಲು ಮತ್ತು ಕಾಲ ಸಹಕರಿಸಲಿಲ್ಲ. ತಮ್ಮ ಗ್ರಹಿಕೆಗೆ ಸಿಕ್ಕ ವಿಷಯಗಳನ್ನು ಚರ್ಚಿಸುತ್ತಾ ಮುಂದಿನ ಬಾರಿ ಯಾವ ವಿಭಾಗಕ್ಕೆ ಭೇಟಿ ನೀಡಬೇಕು ಎನ್ನುವುದನ್ನು ಚರ್ಚಿಸುತ್ತಾ ರೈಲು ನಿಲ್ದಾಣದತ್ತ ಹೆಜ್ಜೆ ಹಾಕಿದೆವು.



। ಜೆ.ರಜನಿ, ಶಿಕ್ಷಕಿ

## 'ಸೈನಿಕ' ಕಾರು

ಒಬ್ಬರ ಬಳಿ ಸುಂದರವಾದ ಕಾರು ಇತ್ತು. ಅದು ನೀಲಿ ಬಣ್ಣದ ಕಾರು. ಅವರು ಆ ದಿನ ಹೋಟೆಲ್‌ಗೆ ಹೋಗಿ, ಮನೆಗೆ ಬಂದು ಮಲಗಿಕೊಂಡರು. ಸ್ವಲ್ಪ ಹೊತ್ತಿನ ನಂತರ ಕಾರು ವಯೋ... ವಯೋ... ವಯೋ ಅಂಥ ಕೂಗಿಕೊಳ್ಳತೊಡಗಿತು. ಅವರಿಗೆ ಎಚ್ಚರವಾಯಿತು. ಎದುಬಂದು ನೋಡಿದಾ ಗ ಕಾರಿನ ಒಳಗೆ ಒಬ್ಬ ಕಳ್ಳ ಇದ್ದ. ಅವರು ದೊಣ್ಣೆ ತೆಗೆದುಕೊಂಡು ಹೊಡೆದರು. ಕಳ್ಳ ಓಡಿಹೋದ. ಆಗ ಅವರು, ಕಾರು ತನ್ನನ್ನು ತಾನೇ ಚೆನ್ನಾಗಿ ನೋಡಿಕೊಳ್ಳುತ್ತದೆ. ಆದ್ದರಿಂದ ಅದಕ್ಕೆ ಏನಾದರೊಂದು ಹೆಸರು ಇಡಬೇಕಲ್ಲ ಅಂದುಕೊಂಡು 'ಸೈನಿಕ' ಎಂದು ಹೆಸರಿಟ್ಟರು.



। ಅಧಿಶ್ರೀ ಮೊರಬದ, ೨ನೇ ತರಗತಿ

## ಕನ್ನಡ ಉಳಿಸೋಣ ಕನ್ನಡ ಬೆಳೆಸೋಣ

ಜಗತ್ತಿನಲ್ಲಿ ಈಗ ಆಂಗ್ಲ ಭಾಷೆ ಬರುತ್ತದೆ ಎಂದರೆ ಮಾತ್ರ ಕೆಲಸ. ಆಂಗ್ಲ ಭಾಷೆಯ ಪ್ರಭಾವ ಎಷ್ಟರ ಮಟ್ಟಿಗೆ ಇದೆ ಎಂದರೆ, ಇಡೀ ಜಗತ್ತೇ ಅದನ್ನು ಮಾತನಾಡುತ್ತದೆ. ಮನೆಯಲ್ಲಿ ಮಕ್ಕಳೂ ಆಂಗ್ಲ ಭಾಷೆಯಲ್ಲಿ ಮಾತನಾಡುವುದು, ಗೆಳೆಯ–ಗೆಳತಿಯರೊಂದಿಗೆ ಆಂಗ್ಲ ಭಾಷೆಯಲ್ಲಿ ಮಾತನಾಡುವುದು ಏಕೆ ಬೇಕು? ಕನ್ನಡದಲ್ಲಿ ಏಕೆ ಮಾತನಾಡಬಾರದು? ಒಂದು ವೇಳೆ ಕನ್ನಡ ಬರುತ್ತಿದ್ದರೆ ಮಾತ್ರ ಕೆಲಸ ಎಂದಿದ್ದರೆ ಎಷ್ಟೋ ಬಡವರಿಗೆ ಸಹಾಯವಾಗುತ್ತಿತ್ತು. ಅದಕ್ಕಾಗಿ ಆಂಗ್ಲ ಬಿಟ್ಟು ಕನ್ನಡದಲ್ಲಿ ಮಾತಾಡೋಣ. ಕನ್ನಡಕ್ಕೆ ಹೆಮ್ಮೆ ತರೋಣ. ಜೈ ಕರ್ನಾಟಕ ಮಾತೆ



। ಮಾನಸ ಉಡುಪ, ೪ ನೇ ತರಗತಿ

## ಏಪ್ರಿಲ್‌ನಿಂದ ಜೂನ್‌ವರೆಗೆ ಶಾಲೆಯಲ್ಲಿ ನಡೆದ ಕಾರ್ಯಕ್ರಮಗಳು

❖ ಶಾಲೆಗಳಲ್ಲಿ ಮಕ್ಕಳಿಗೆ ಪಠ್ಯ ಮತ್ತು ಸಹಪಠ್ಯ ವಿಷಯಗಳನ್ನು ಏಕೆ ಕಲಿಸಬೇಕು ಎಂಬ ವಿಷಯದ ಕಾರ್ಯಾಗಾರವನ್ನು ಏಪ್ರಿಲ್ ತಿಂಗಳಲ್ಲಿ ನಮ್ಮ ಶಾಲೆಯ ಶಿಕ್ಷಕರಿಗೆ ಆಯೋಜಿಸಲಾಗಿತ್ತು. ಸಂಪನ್ಮೂಲವ್ಯಕ್ತಿಗಳು ಚರ್ಚೆಯಲ್ಲಿ ಭಾಗವಹಿಸಿ ತಮ್ಮ ಸಲಹೆ ಸೂಚನೆಗಳನ್ನು ನೀಡಿದರು.

❖ ಜೂನ್ ೫ ರಂದು ಪ್ಲಾಸ್ಟಿಕ್ ಮುಕ್ತ ಪರಿಸರ ದಿನಾಚರಣೆ ಆಚರಿಸಲಾಯಿತು.

❖ ಜೂನ್ ೬ ರಂದು ಮಾಸ್ತಿ ಅವರ ಕಥೆ, ಪುಸ್ತಕಗಳನ್ನು ಓದುವ ಮೂಲಕ ಅವರ ಜನ್ಮ ದಿನವನ್ನು ಆಚರಿಸಲಾಯಿತು. ಜೂನ್ ೮ ರಂದು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಸಹಯೋಗದಲ್ಲಿ ಡಾ. ಸುಂದರ ಕೇನಾಜೆಯವರ ಭಾವದೊಳಗಿನ ಬಿಂಬ, ಪರಿಸರ, ಶಿಕ್ಷಣ, ಕೃಷಿ ಬಗೆಗಿನ ಅಂಕಣ ಬರಹಗಳ ಪುಸ್ತಕ ಬಿಡುಗಡೆ ಮತ್ತು ಅಂಕಣ ಬರಹಗಳ ಕುರಿತ ಸಂವಾದ ಕಾರ್ಯಕ್ರಮವನ್ನು ಪತ್ರಕರ್ತರ ಭವನದಲ್ಲಿ ಆಯೋಜಿಸಲಾಗಿತ್ತು.

❖ ಜೂನ್ ೨೩ ರಂದು ಆದಿವಾಸಿ ಸಮುದಾಯಗಳ ಸಾಮಾಜಿಕ ಸೇವಾ ಕಾರ್ಯಕರ್ತರಾದ ಡಾ.ಪ್ರಕಾಶ ಆಮ್ಟೆ ಮತ್ತು ಮಂದಾಕಿನಿ ಆಮ್ಟೆ ಅವರ ಜೊತೆ ಸಂವಾದ ನಡೆಯಿತು. ಜೂನ್ ೯ ರಂದು ಪೋಷಕರ ಮೊದಲ ಸಭೆ ನಡೆಯಿತು. ಜೂನ್ ೨೬ ರಂದು ಧಾರವಾಡದ ಆಟ–ಮಾಟ ತಂಡದಿಂದ 'ಮತ್ತೊಬ್ಬ ಮಾಯಿ' ನಾಟಕ ಪ್ರದರ್ಶನವಿತ್ತು

## ರಂಗಿನಾಟಕ್ಕೆ ಮಕ್ಕಳೇ ತಯಾರಿಸಿದ ಬಣ್ಣದ ಪುಡಿ

ನಮ್ಮ ಶಾಲೆಯಲ್ಲಿ ಪ್ರತಿ ವರ್ಷ ಹೋಳಿ ಹಬ್ಬವನ್ನು ವಿಶಿಷ್ಟವಾಗಿ ಆಚರಿಸುತ್ತೇವೆ. ಅರಿಶಿಣ, ಕುಂಕುಮ, ಬೀಟ್‌ರೂಟ್, ಸೊಪ್ಪಿನ ರಸಗಳ ಬಣ್ಣಗಳೊಂದಿಗೆ ನೀರಾಟವಾಡುವುದು ವಾಡಿಕೆ.

ಅದರ ಜೊತೆ ಈ ವರ್ಷಕ್ಕೇನಾದರೂ ಹೊಸ ಪ್ರಯೋಗ ಮಾಡಬೇಕೆಂದು ೨–೩ ವಿಷಯಗಳನ್ನು ಇಟ್ಟುಕೊಂಡು ಪರಿಶೀಲಿಸುವಾಗ ನೈಸರ್ಗಿಕ ಬಣ್ಣಗಳ ಪುಡಿ ತಯಾರಿಸುವ ಬಗ್ಗೆ ಯೋಚನೆ ಹೊಳೆಯಿತು. ಕೆಲವೇ ಅಂಗಡಿಗಳಲ್ಲಿ ದೊರೆಯುವ ನೈಸರ್ಗಿಕ ಬಣ್ಣದ ಪುಡಿ, ಕಡಿಮೆ ಪ್ರಮಾಣಕ್ಕೂ ಬಹಳ ದುಬಾರಿ. ನಾನೇ ಒಂದು ಪ್ರಯೋಗ ಮಾಡೇಬಿಡೋಣ ಎಂದುಕೊಂಡು ಮಾಹಿತಿ ಹುಡುಕಿದೆ. ಈ ನನ್ನ ಪ್ರಯೋಗಕ್ಕೆ ಸಹ ಶಿಕ್ಷಕಿ ಉಷಾ ಮತ್ತು ವಿದ್ಯಾರ್ಥಿನಿ ಶ್ರೀವಲ್ಲಿ ಬಹಳ ಆಸಕ್ತಿ ತೋರಿದರು. ಮೂವರೂ ಸೇರಿ



ಬೋಗನ್‌ವಿಲ್ಲಾ ಹೂವು, ಅಕ್ಕಿಹಿಟ್ಟು ಸೇರಿಸಿ ನಾದಿ, ತಟ್ಟಿ, ಒಣಗಿಸಿ, ಮತ್ತೆ ಪುಡಿ ಮಾಡಿದಾಗ ಸೊಗಸಾದ ಗುಲಾಬಿ ಬಣ್ಣದ ಪುಡಿ ನಮ್ಮ ಪ್ರಯೋಗಗಳಿಗೆ ನಾಂದಿ ಹಾಡಿತು. ಇದೆಲ್ಲ ಪ್ರಕ್ರಿಯೆಯನ್ನು ಗಮನಿಸುತ್ತಿದ್ದ ಮಕ್ಕಳು ತಮ್ಮ ಪ್ರಯೋಗವನ್ನು ಪ್ರಾರಂಭಿಸಿದರು. ಮರುದಿನ ಮನೆಯಿಂದ ಗುಲಾಬಿ, ಸೇವಂತಿಗೆ, ದಾಸವಾಳ, ವಿವಿಧ ಗಿಡಗಳ ಎಲೆಗಳು, ಕ್ಯಾರೆಟ್... ಹೀಗೆ ನಾನಾ ವಸ್ತುಗಳೊಂದಿಗೆ ಪ್ರಯೋಗ ಶುರು ಮಾಡಿದರು. ಶ್ರೀವಲ್ಲಿ, ಶೀತಲ್, ಅಮೋಘ, ಪೃಥ್ವಿ, ಪ್ರಶಾಂತ್, ಸರಸ್ವತಿ ಎಲ್ಲರೂ ಸೇರಿ ಸುಮಾರು ಹತ್ತರಿಂದ ಹನ್ನೆರಡು ವಿವಿಧ ಬಣ್ಣಗಳ ಪುಡಿ ತಯಾರಿಸಿದರು. ಮುಂದಿನ ಹೋಳಿ ಹಬ್ಬದಲ್ಲಿ ತಾವೇ ತಯಾರಿಸಿದ ಪುಡಿಗಳಿಂದ ಮಕ್ಕಳ ರಂಗಿನಾಟಕ್ಕೆ ಹೆಚ್ಚು ರಂಗು ತರಬಹುದು.

## ಮಾಯೇ ನೀನೊಂದು ಮಾಯೆ

ನೀ ಹೀಗೇಕೆ ಮಾಡಿದೆ
ನಾ ನಿನ್ನನು ಪೂಜಿಸಿದೆ,
ಪ್ರೀತಿಸಿದೆ , ಬೇಡಿದೆ
ನೀ ಮಾಡಿದ ಕೆಲಸದಿಂದ
ಎಂದಿಗೂ ಇರದ ಕೋಪ,
ದ್ವೇಷ ಇಂದು ನನ್ನಲ್ಲಿ....
ನೀ ಇದ್ದೀಯೋ ಅಥವಾ
ಇಲ್ಲವೋ.... ನನಗಿ
ತಿಳಿಯದು

। ಅಧಿತಿ ಬಿ. ಆರ್.,
೯ನೇ ತರಗತಿ



## ಶಾಲೆಯೆಂದರೆ ತುಂಬಾ ಇಷ್ಟ



ನಾನು ಹೊಸದಾಗಿ ಅರಿವು ಶಾಲೆಗೆ ಸೇರಿದ್ದೇನೆ. ಈ ಶಾಲೆ ಮತ್ತು ಮಹೇಶ್ವರಿ ಅಕ್ಕ ನನಗೆ ತುಂಬಾ ಇಷ್ಟ. ನಮ್ಮ ಶಾಲೆಯಲ್ಲಿ ಪಾಠ ಕಲಿಸುತ್ತಾರೆ. ನಾಟಕ ಮಾಡಿಸುತ್ತಾರೆ. ಹಾಡು ಹೇಳಿಕೊಡುತ್ತಾರೆ. ಮಕ್ಕಳ ಸಿನಿಮಾ ತೋರಿಸುತ್ತಾರೆ. ಇಲ್ಲಿ ಚಿಟ್ಟೆ ಉದ್ಯಾನ ಇದೆ. ಆಟದ ಮೈದಾನ ಇದೆ. ಬಾಳೆ ತೋಟವಿದೆ. ಶಾಲೆಗೆ ನಾನು ಕಾರಿನಲ್ಲಿ ಬರುತ್ತೇನೆ.

। **ಸಿಂಧು ಶಮಾತ್ಮಿಕಾ ಕೆ.,** ೨ನೇ ತರಗತಿ



ನನಗೆ ಗೇರ್ ಸೈಕಲ್ ಇಷ್ಟ. ಯಾಕೆಂದರೆ, ಅದರಲ್ಲಿ ತುಂಬಾ ಗೇರ್‌ಗಳಿರುತ್ತವೆ. ನನಗೆ ಗೇರ್ ಅಂದರೆ ಗೊತ್ತಿರಲಿಲ್ಲ. ಆವಾಗ ನಾನು ಯೋಚಿಸುತ್ತಿದ್ದೆ. ಗೇರ್ ಅಂದರೆ ಏನು? ಆವಾಗ ನನಗೆ ಗೇರ್ ಅಂದರೆ ಏನು ಅಂಥ ಅರ್ಥವಾಯಿತು. ಗೇರ್‌ನಲ್ಲಿ ೨೪ ಅಥವಾ ೩೦ ಗೇರ್‌ಗಳು ಇರುತ್ತವೆ.

। **ಶಾನ್‌ಗೌಡ ಎಸ್. ಎನ್.,** ೪ನೇ ತರಗತಿ

## ಘರ್ಷಣೆ ಉಂಟಾಗುವ ಬಗೆ

ಯಾವುದಾದರೂ ವಸ್ತುವಿನ ಮೇಲ್ಮೈ ಕಣಗಳು ಭೂಮಿಯ ಕಣಗಳ ಜೊತೆ ಸೇರಿದಾಗ ಘರ್ಷಣೆ ಉಂಟಾಗುತ್ತದೆ. ಉದಾಹರಣೆಗೆ ಬೆಂಕಿ ಪೊಟ್ಟಣ.



ಹಾಗೆಯೆ, ಗಡಿಯಾರವನ್ನು ತೆಗೆದು ನೋಡಿದಾಗ ಅಲ್ಲಿ ಕೆಲವು ಚಕ್ರಗಳಂತಹ ಚಿಕ್ಕ ಚಿಕ್ಕ ವಸ್ತುಗಳು ತಿರುಗುತ್ತಿರುತ್ತವೆ. ಅದೂ ಒಂದು ಘರ್ಷಣೆ ಉಂಟು ಮಾಡುವ ವಿಧಾನ. ಇದರಂತೆಯೆ, ಗಾಡಿಗಳಲ್ಲೂ ಘರ್ಷಣೆ ಇರುತ್ತದೆ. ಆ ಘರ್ಷಣೆ ಹೆಚ್ಚಾಗಿದ್ದರೆ ಗಾಡಿಯ ವೇಗ ಕಮ್ಮಿ ಇರುತ್ತದೆ. ಅದೇ ಘರ್ಷಣೆ ಕಮ್ಮಿ ಇದ್ದರೆ ಗಾಡಿಯ ವೇಗ ಹೆಚ್ಚಾಗುತ್ತದೆ. ಆ ಘರ್ಷಣೆಯನ್ನು ಕಡಿಮೆ ಮಾಡಲು ಕೀಲೆಣ್ಣೆಬಳಸುತ್ತಾರೆ. ಇದಕ್ಕೆ ಇನ್ನೊಂದು ಉದಾಹರಣೆ ಸೈಕಲ್. ಅಂತೆಯೆ, ಘರ್ಷಣೆಗೆ ಉದಾಹರಣೆ ಮೀನು ಮತ್ತು ನೀರಿನ ಘರ್ಷಣೆ.

। **ಪರಾಂಕುಶ್ ಎಸ್.ಜಿ.,** ೭ ನೇ ತರಗತಿ

## ಸೂರ್ಯನ ಮದುವೆ

ಬನ್ನಿರಕ್ಕ ಬನ್ನಿರಣ್ಣ
ಸೂರ್ಯನ ಮದುವೆಗೆ
ತನ್ನಿರಕ್ಕ ಮದುಮಗಳಿಗೆ ಕಪ್ಪು ಕಾಡಿಗೆ
ಗೊತ್ತೇನು ಮದುಮಗಳು ಯಾರೆಂದು?
ಮೂರಕ್ಷರಗಳಲಿ ಹೇಳಲಾ ನಾನಿಂದು
ಸುಂದರ ಕೆಂಪುಗ್ರಹ, ಅದೇ ಮಂಗಳ ಗ್ರಹ
ಅವಳಿಗಿಷ್ಟ ಚಹಾ/ ಯಾಕಪ್ಪ ಅವಳಿಗೆ ಅಷ್ಟು
ದೊಡ್ಡ ಬಳೆ/
ಅಯ್ಯೋ ಗೊತ್ತಿಲ್ವ? ಅದೇ ಅವಳಿಗೆ ಕಳೆ
ತಾಳಿ ಕಟ್ಟಿದನು ಸೂರ್ಯ
ಚಪ್ಪಾಳೆಯೊಂದಿಗೆ ಮುಗಿಯಿತು ಸಮಾರಂಭ
ಇನ್ನೊಮ್ಮೆ ಸೌರಮಂಡಲದಲ್ಲಿ
ನಡೆದರೆ ಮದುವೆ
ನಕ್ಷತ್ರಗಳನ್ನು ಕೂಡಿ ತಪ್ಪದೆ
ಹೋಗಿಬರುವೆ
ನಿಮ್ಮನು ಮರೆಯದೆ ಕರೆವೆ.



। **ಸರಸ್ವತಿ** 6ನೇ ತರಗತಿ

## ಗಿಳಿ ಹಿಂದಿರುಗಿಸಿದ ರಾಜ

ಒಬ್ಬ ಬುದ್ಧಿವಂತ ರಾಜನಿದ್ದನು. ಅವನು ಬೇಟೆಯಾಡಲು ಹೋಗುತ್ತಿರುವಾಗ ಪಂಜರದಲ್ಲಿ ಗಿಳಿಯೊಂದು ಕಾಣಿಸಿತು. ರಾಜನಿಗೆ ಇಷ್ಟವಾಗಿ ಹೇಗಾದರೂ ಮಾಡಿ ತೆಗೆದುಕೊಂಡು ಹೋಗಬೇಕೆಂದು ನಿರ್ಧರಿಸಿದನು. ತನ್ನ ಆಸ್ಥಾನಕ್ಕೆ ಕರೆದುಕೊಂಡು ಹೋದನು. ಆಸ್ಥಾನ ತಲುಪಿದ ನಂತರ ಎಲ್ಲರನ್ನೂ ಸಭೆಗೆ ಆಹ್ವಾನಿಸಿದನು. ಪಂಜರದಲ್ಲಿದ್ದ ಗಿಳಿ ಮಿಣಮಿಣ ಹೊಳೆಯುತ್ತಿತ್ತು. ಒಬ್ಬ ಮಂತ್ರಿ ಈ ಗಿಳಿ ನಿಮಗೆ ಎಲ್ಲಿ ಸಿಕ್ಕಿತು ಎಂದು ಪ್ರಶ್ನಿಸಿದ. ರಾಜನು ಎಲ್ಲ ವಿಷಯ ತಿಳಿಸಿದ. ಎಲ್ಲರೂ ಸಂತೋಷವಾದರು. ಒಬ್ಬ ವ್ಯಾಪಾರಿ ಆಸ್ಥಾನಕ್ಕೆ ಬರುತ್ತಾನೆ. ಇದನ್ನು ನೋಡಿದ ಸೈನಿಕ ರಾಜರೆ, ನಿಮ್ಮನ್ನು ಹುಡುಕಿಕೊಂಡು ಒಬ್ಬ ವ್ಯಾಪಾರಿ ಬಂದಿದ್ದಾನೆ ಎಂದು ತಿಳಿಸುತ್ತಾನೆ. ರಾಜನು ಅವನನ್ನು ಕರೆಸುತ್ತಾನೆ. ವ್ಯಾಪಾರಿ ರಾಜನಿಗೆ ನನ್ನ ಗಿಳಿ ಕಳೆದುಹೋಗಿದೆ, ನಿಮ್ಮ ಬಳಿ ಇದೆಯಾ ಎಂದು ಕೇಳುತ್ತಾನೆ. ತಕ್ಷಣ ರಾಜನು ಮಂತ್ರಿಯನ್ನು ಕರೆದು ಆ ಗಿಳಿಯನ್ನು ಕೊಡಲು ಹೇಳುತ್ತಾನೆ. ವ್ಯಾಪಾರಿ ರಾಜನಿಗೆ ಧನ್ಯವಾದ ತಿಳಿಸಿ ಗಿಳಿಯನ್ನು ತೆಗೆದುಕೊಂಡು ಹೋಗುತ್ತಾನೆ. ವ್ಯಾಪಾರಿ ಗಿಳಿಯೊಂದಿಗೆ ಸಂತೋಷವಾಗಿರುತ್ತಾನೆ.



। **ಸಿಂಚನ** ೩ನೇ ತರಗತಿ

## ದುಡ್ಡನ್ನು ವೇಸ್ಟ್ ಮಾಡದಿರಿ



ನಮಗೆ ಬೇಜಾರಾದಾಗ ಟಿ.ವಿ.ಯಲ್ಲಿ ಸಿನಿಮಾ, ನ್ಯೂಸ್, ಕಾರ್ಟೂನ್ ಮುಂತಾದ ಕಾರ್ಯಕ್ರಮಗಳನ್ನು ನೋಡಲು ಸಾಧ್ಯವಾಗುತ್ತದೆ. ಆದರೆ ಟಿ.ವಿ.ಯನ್ನು ಕಾಲು ಗಂಟೆ ಮೇಲೆ ನೋಡಿದರೆ ನಮ್ಮ ಕಣ್ಣುಗಳು ಹಾಳಾಗುವ ಸಾಧ್ಯತೆ ಇದೆ. ಆದರೆ ನಮಗೆ ಕೆಲವು ಚಾನಲ್‌ಗಳು ಇಷ್ಟ ಇರುವುದಿಲ್ಲ. ಆದ್ದರಿಂದ ಆ ಚಾನಲ್‌ಗಳನ್ನು ಹಾಕಿಸಿ ನಿಮ್ಮ ದುಡ್ಡನ್ನು ವೇಸ್ಟ್ ಮಾಡದಿರಿ. । **ಸಮರ್ಥ,** ೩ನೇ ತರಗತಿ

## ಟೀಚರ್ ಸುಮ್ಮನಾದರೆ ಬೇಜಾರು



ನಾವು ಶಾಲೆಗೆ ಬಂದಾಗ ಅಸೆಂಬ್ಲಿಯಲ್ಲಿ ಪ್ರೊಜೆಕ್ಟರ್ ಹಾಕಿ ಟೀಚರ್ ನಮಗೆ ವಿಡಿಯೋ ತೋರಿಸುತ್ತಾರೆ. ಅಸೆಂಬ್ಲಿ ಮುಗಿದ ಮೇಲೆ ಚೇತನಾ ಅಕ್ಕ, ಅರ್ಚನಾ ಅಕ್ಕ, ಉಷಾ ಅಕ್ಕ, ಸುಧಾ ಅಕ್ಕ ಅವರೆಲ್ಲ ಪಾಠ ಮಾಡ್ತಾರೆ. ನಾವು ಕಲಿಯುವವರೆಗೂ ಬಿಡುವುದಿಲ್ಲ. ಗಲಾಟೆ ಮಾಡಿದರೆ ಸ್ವಲ್ಪ ಹೊತ್ತು ಸುಮ್ಮನೆ ಆಗುತ್ತಾರೆ. ಆಗ ನಮಗೇ ಬೇಜಾರಾಗುತ್ತದೆ. ನಮಗಾಗಿ ಅವರು ಎಷ್ಟು ಕಷ್ಟಪಡುತ್ತಾರೆ ಎಂಬುದನ್ನು ನೋಡಿ ಸೈಲೆಂಟ್ ಆಗಬೇಕು ಅನಿಸುತ್ತದೆ. । **ನಮಿತ್,** ೩ನೇ ತರಗತಿ

## ಎಳೆಯ ವಯಸ್ಸಿನ ಸಿಹಿ ಅನುಭವಗಳು...

ನನ್ನ ಹೆಸರು ಮೇಘ. ನನಗೀಗ ೧೪ ವರ್ಷ. ಪ್ರಬಂಧ ಬರೆಯಬೇಕಾದಾಗ ಬೇರೆ ವಿಷಯಕ್ಕಿಂತ ಎಳೆಯ ವಯಸ್ಸಿನ ಸಿಹಿ ಅನುಭವಗಳು ನೆನಪಾಗಿ ಬರೆದಿದ್ದೇನೆ. ನನ್ನ ಅಪ್ಪ ಭಾರತೀಯ ಸೇನೆಯ ಕೆಲಸದಲ್ಲಿದ್ದರು. ಆದಕಾರಣ ಅವರಿಗೆ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವರ್ಗಾವಣೆಯಾಗುತ್ತಿತ್ತು. ಇದರಿಂದ ನನಗೂ ರಾಜ್ಯಗಳನ್ನು ಸುತ್ತುವ ಅವಕಾಶ ಸಿಕ್ಕಿತ್ತು. ಮೊದಲಿಗೆ ಮಹಾರಾಷ್ಟ್ರದ ನಾಗ್ಪೂರ್‌ನ ನೆನಪುಗಳು ಹೀಗಿದ್ದವು. ಆ ಊರಿನಲ್ಲಿ ನನಗೆ ಮೊದಲು ಯಾರೂ ಗೆಳೆಯರು ಇರಲಿಲ್ಲ. ಒಂದು ನಾಯಿ ನಮ್ಮ ಮನೆಯ ಹತ್ತಿರ ಬರುತ್ತಿತ್ತು. ಅದಕ್ಕೆ ನಾನು ಪ್ರತಿದಿನ ಬಿಸ್ಕತ್ತು ಹಾಕುತ್ತಿದ್ದೆ. ಸ್ವಲ್ಪ ದಿನದ ನಂತರ ಪಪ್ಪೂ, ಪಂಕಜ್ ಎಂಬುವರಿಬ್ಬರು ನನ್ನ ಸ್ನೇಹಿತರಾದರು. ಮೂವರೂ ಸೇರಿ ಆಟ ಆಡುತ್ತಿದ್ದೆವು. ಫಾಯರ್ ಕ್ಯಾಂಪ್ ಹಾಕಿ ಡ್ಯಾನ್ಸ್ ಮಾಡುತ್ತಿದ್ದೆವು. ಹೋಳಿ ಹಬ್ಬ ಬಂದಾಗ ಎಲ್ಲರೂ ಸೇರಿ ಬಣ್ಣ ಎರಚಿಕೊಂಡು ಹೋಳಿ ಆಡುತ್ತಿದ್ದೆವು. ನಾನು ಕುದುರೆ ಸವಾರಿ ಕಲಿಯುವುದಕ್ಕೆ ಹೋಗುತ್ತಿದ್ದೆ. ನಾನು ಓಡಿಸುತ್ತಿದ್ದ ಕುದುರೆಯ ಹೆಸರು ಗೋರಿ. ಅಲ್ಲಿ ಇದ್ದ ಕುದುರೆಗಳಲ್ಲಿ ಅತಿ ಕಪ್ಪು ಬಣ್ಣದ ಕುದುರೆಯಾಗಿತ್ತು. ಒಂದು ಸಲ ಗೋರಿ ನನ್ನನ್ನು ಬೀಳಿಸಿ ಬಿಟ್ಟಿತು. ಆದರೂ ಸವಾರಿ ಮಾಡುವುದನ್ನು ಬಿಡಬೇಕು ಎನಿಸಲಿಲ್ಲ. ನನ್ನ ಅಪ್ಪನಿಗೆ ಪಶ್ಚಿಮಬಂಗಾಳದ ಸಿಲಿಗುರಿಗೆ ವರ್ಗಾವಣೆಯಾಯಿತು. ಅಲ್ಲಿ ಕಾಡಾನೆಗಳು ನಮ್ಮ ಮನೆಯ ಹಿಂದೆಯೇ ಓಡಾಡುತ್ತಿದ್ದವು. ಅರಣ್ಯ ಸಿಬ್ಬಂದಿ ಪಟಾಕಿ ಸಿಡಿಸಿ ಮತ್ತೆ ಕಾಡಿಗೆ ಓಡಿಸುತ್ತಿದ್ದರು. ಒಂದು ರಾತ್ರಿ ಆನೆಯೊಂದು ನಮ್ಮ ಮನೆಯ ಪಕ್ಕದಲ್ಲೇ ಬಂದು ನಿಂತುಬಿಟ್ಟಿತು. ಅದು ತುಂಬಾ ಭಯಾನಕವಾಗಿತ್ತು. ಆ ದಿನದ ನಂತರ ನಮ್ಮ ಮನೆಯ ಮುಂದೆ ಬರಲೇ ಇಲ್ಲ. ಸಿಲಿಗುರಿಯ ನಂತರ ರಾಜಸ್ಥಾನದ ಜೈಪುರಕ್ಕೆ ಬಂದೆವು. ಅಲ್ಲಿಯ ಶಾಲೆ ಬೆಳಗ್ಗೆ ೭.೩೦ ಕ್ಕೆ ಶುರುವಾಗಿ ಮಧ್ಯಾಹ್ನ ೨.೩೦ ಕ್ಕೆ ಮುಗಿಯುತ್ತಿತ್ತು. ದಿನ ಶುರುವಾಗಿ ಯಾವಾಗ ಮುಗಿಯುತ್ತಿತ್ತೋ ಗೊತ್ತೇ ಆಗುತ್ತಿರಲಿಲ್ಲ. ನಾನು ನನ್ನ ಗೆಳತಿಯರಾದ ರಿಯಾ ಮತ್ತು ನಿತ್ಯಾ ಒಟ್ಟಿಗೆ ಆಟವಾಡಿ ಈಜು ಕಲಿಯಲು ಹೋಗುತ್ತಿದ್ದೆವು. ಅದಾದ ಸ್ವಲ್ಪ ವರ್ಷಗಳಲ್ಲಿ ನಾವು ಮೈಸೂರಿಗೆ ಬಂದೆವು. ನನಗೆ ತುಂಬಾ ದುಃಖವಾಯಿತು. ನನ್ನ ಸ್ನೇಹಿತರನ್ನು ಬಿಟ್ಟು ಬರುವುದಕ್ಕೆ ಇಷ್ಟವಿರಲಿಲ್ಲ. ಮೈಸೂರಿಗೆ ಬಂದ ಕೆಲವು ದಿನಗಳಲ್ಲೇ ಇಲ್ಲಿಯ ಸ್ನೇಹಿತರು ಸಿಕ್ಕಿದರು. ಮುಂದಿನ ದಿನಗಳಲ್ಲಿ ನನ್ನ ಜೀವನದ ಇಲ್ಲಿಯ ಅನುಭವಗಳೂ ಸಿಹಿಯಾಗಿರುತ್ತವೆ ಎಂದು ಆಶಿಸುತ್ತೇನೆ.






। **ಮೇಘ ಎಸ್.,** ೯ನೇ ತರಗತಿ

## ನನ್ನ ಮುದ್ದಿನ ಮೀನು



ಬಾ ಬಾ ಮೀನೆ
ನನ್ನಯ ಮುದ್ದಿನ ಮೀನೆ
ತೊಟ್ಟಿಯ ಒಳಗೆ ಆಡುವೆ ನೀನೆ
ನಿನ್ನನ್ನು ನೋಡುತ ಮರೆಯುವೆ ನನ್ನೆ
ನಿನ್ನನು ನೋಡುತ ಕುಣಿಯುವೆ ನಾನೆ

। **ಭವಿತ,** ೪ನೇ ತರಗತಿ



### ಜೂನ್ ತಿಂಗಳಿನಲ್ಲಿ ಶಾಲೆಗೆ ಭೇಟಿ ನೀಡಿದವರು

೧. ಜಲಜಾಕ್ಷಿ ಕೆ., ಪ್ರಾಂಶುಪಾಲರು, ವಿವೇಕಾನಂದ ವಿದ್ಯಾಕೇಂದ್ರ ಬೆಂಗಳೂರು
೨. ಆಶಾ ಬೆಳ್ಳಾರೆ, ಸಹ ಶಿಕ್ಷಕಿ ಪುತ್ತೂರು



## Malenadu

Poof! Time travel to the past, the year I went to Malenadu.

I went to school and got into the bus and this time I was in Rashmi Akka's team. First, I was playing with Dharmik and Abhiram, then we were all looking out of the window. Soon I fell asleep. I woke up and there I was at Malenadu - amazing beautiful nature!!! A very good relaxing night's sleep after a long journey.

Next day... while trekking on the enormous mountain, we went inside a cave and saw a Shivalinga and found lots of bats. Indeed a tough walk... Phew!!!

Our next visit was to a beautiful spot where we saw lots of mountains and a beautiful sunset. We clicked lots of pictures. We also wentto a hill where we saw a ginormous statue of Gomateshwara. Later, we came back and slept. The next morning a grandpa who came at the gate, spoke Konkani and I knew to speak Konkani too. So we spoke for some time and he went home.




Later, my friends and I climbed the bus and came to Mysore. Home sweet home.

Poof! Time travel to the future. Next time, I will write about my visit to Kergalli.

| Angelo Aadarsh Andrade, Standard 5

# Wrestler's of Western Ghats

Western Ghat's is the beautiful green lush forest in India. It is one of the biggest forest's in India. It is home to varieties of animals,insects,spider's, amphibians etc...In western ghat, rain brings life. That's the time the amphibi ans come out. There are three types. They are frogs, caecilians, salamander's but western ghats has the huge number of frog's. One of the important variety is dancing frog.This belong to the family Micrixalidae. These frogs dance for reproduction and maintaining territory. It dances using it's hind legs. There are more than 14 species of dancing frog's in the western ghat's. They are endemic and some are the rarest frog's in the world. They are only found near the water bodies. Unfortun ately they are only found in small pockets of western ghats. Hence they are at risk as the conserv ation is difficult here. So, we must conserve these wrest ler's for our future, before it becomes too late.





| Pradhyumna, Standard 10




We had been to Kokkada village in south canara for two days. From there we went to Ujire and stayed there for four days attending a marriage. After a long travel and enjoyment we came back to our home in Mysore. I am happy about this family tour. This is how I spent my summer holidays.



| Sanchitha , Standard 5

## Dr. PRAKSH AMTE'S VISIT



**Magsaysay award winning Social activist Dr. Praksh amte and Mandakini amte visited Arivu school on 23rd june**

# Fiction: A nightmarish trek

Continued from the last issue...

And we all packed our gear and started to trek. While packing we found a note in the kitchen, of Ramlal, "see you all down. No one woke up at my call. Hope you all will come back down soon". We crumpled the paper into a ball and threw it away. From here, our super-adventure story begins.

We took the responsibility of all the things the staff had to do. The girls took up the kitchen work and we, the boys, took up the camping and packing work. We chalked out the map for the next 12 days. Just one kilometer was left to our next camping site. But we all got caught in heavy rains. Thankfully, we found a big den, where we all were stuck for three and a half hours. When we were able to get to our camp-site, we quickly erected our tents, as our stomach was singing songs for we had nothing since morning. The night's dinner was the best meal in the whole of our trek. During night the rain was back, but we were almost going to sleep. So the rain didn't give us too much trouble. In the morning, we all woke up due to a scary sound. It was a fight for a dead mule between a Snow-Leopard and a Lamargier. After watching that we all decided to stay put at the camp-site where we were because the night rain had made lot of small streams. In the morning, we had toast for breakfast.

Next day, when we were trekking, we found a big river in our way. It was time to cross the river. All of us crossed the river. I was at the last to cross. While I was crossing, a big rock fell on the rope and it got cut. Within a few seconds, I discovered that I was being carried along in that big river. Finally, I was able to get out of the river and find a den. I made fire with a small pocket survival-kit. I was all alone. I slept for few hours and when I woke up there were two big Yetis. When I saw them, I was able to hear my own heartbeats. I ran out of the den as fast as I could. Though one of the Yetis chased me, I got away with a few scratches, thanks to the self-defense technique against wild-beasts which my youth-club teacher Somashekhar had taught me. When I ran to the river, I was able to see a bit of smoke rising from the opposite bank. I thought my friends were there. And believing it, I jumped into the river and got to the other bank.

When I crept into the camp, it was night. And all of them were in the kitchen tent trying to keep warm. When I unzipped the tent, there was a loud scream from within the tent. It was my friends who mistook me for a bear. I soon got into dry clothes and I got my wounds cleaned-up. When we were having our food, which was as delicious as that of the other day, a man with a burning Beedi in his mouth entered the tent. He told us that he was an army man. He gave us some instructions and went away. Following these we all reached the top, on the 14th day of our trek. We were within the range of a mobile network and informed others who were anxiously waiting for news from us at the Bolatha Ghat. The news that we were alive and were coming back cheered them up. On the summit we found some big wooden logs from which we made a sledge and sledged back to Bolatha Ghat in only half a day.

The next day we were in the Newspapers' headlines: "Brave kids who completed the trek in the most terrific weather".



| Amoghavarsha, 10th Standard